**ನ ಮಾಧವ ಸಮೋ ದೇವಃ : ನ ಚ ಮಧ್ವ ಸಮೋ ಗುರುಃ**

# ಶ್ರೀ ನ ರ ಹ ರಿ ತೀ ರ್ಥ ಗು ರು ಭ್ಯೋ ನ ಮಃ




ಭೂದೇವೀ ರಮಣಾಸಕ್ತೋ ರಘ್ವೀಶ ಪದಮಾನಸಃ
ನೃಹರ್ಯಾಖ್ಯ ಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

ಭೂದೇವಿಗೆ ಪತಿಯಾದ ಭಗವಂತನಲ್ಲಿ ಭಕ್ತಿಯುಳ್ಳ, ರಘುಕುಲತಿಲಕ ಶ್ರೀರಾಮಚಂದ್ರನ ಪಾದವನ್ನು ಸದಾ ಧ್ಯಾನಿಸುವ, ನರಹರಿತೀರ್ಥರು ನಮ್ಮ ಅಭೀಷ್ಟಗಳನ್ನು ಕರುಣಿಸಲಿ.

ಸಸೀತಾ ಮೂಲರಾಮಾರ್ಚಾ ಕೋಶೇ ಗಜಪತೇಃ ಸ್ಥಿತಾ ।
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿ ಭಿಕ್ಷುವೇ ॥

ಗಜಪತಿ ರಾಜನ ಕೋಶದಲ್ಲಿದ್ದ ಸೀತಾಸಹಿತ ಮೂಲರಾಮನ ಪ್ರತಿಮೆಯನ್ನು ತಂದ ಶ್ರೀ ನರಹರಿತೀರ್ಥರನ್ನು ನಮಸ್ಕರಿಸುವೆ.

**( ಆ ರಾ ಧ ನೆ : ಪು ಷ್ಯ ಮಾ ಸ ಕೃ ಷ್ಣ ಪ ಕ್ಷ ಸ ಪ್ತ ಮಿ )**

ರಾ ಗ – ಮು ಖಾ ರಿ : ತಾ ಳ – ಝ ಂ ಪೆ ತಾ ಳ

ನರಹರಿ ತೀರ್ಥರ ಮಹಿಮೆ ಕೇಳಿರೊ
ನರದೇಹವನ್ನು ಸಾರ್ಥಕ ಮಾಡಿರೊ ।ಪ।
ಕಾರ್ಯಸ್ಥ ಬ್ರಹ್ಮ ಮಾಡಿಸಿ ಪೂಜಿಸಿ ಕೊಡಲು
ಆರ್ಯ ಜಾಬಾಲ ಮುನಿಗೆ ಪ್ರಸನ್ನನಾಗಿ
ಭಾರ್ಯಸಹಿತ ಶರ್ಮ ಪೂಜಿಸಿ ಸೌಭರಿಗೆ ಕೊಡಲು
ಸೂರ್ಯ ವಂಶಕೆ ರಾಮ ಸೀತೆ ಬರಲು ।೧।

ಜಾಂಬವಂತನು ಪೂಜಿಸಿ ವೇದಗರ್ಭಗೆ ಕೊಡಲು
ಕುಂಭೇಶ್ವರನ ಕೋಶದಲ್ಲಿ ಇರಲು
ಅಂಬುಜೋದ್ಭವನಲ್ಲಿ ನಿತ್ಯ ಪೂಜಿಸುತಿರಲು
ಜಂಭಾರಿ ಪುರವನ್ನೈದಿದನು ಆಜನಿಪ ।೨।

ಗುರು ಆನಂದತೀರ್ಥರಿಂದ ಚತುರಾಶ್ರಮ ಸ್ವೀಕರಿಸಿ
ವರ ಗಗನ ನದೀ ತೀರದಿ ಗುಹ್ಯದೊಳಿರಲು
ಕರಿ ಬಂದು ಕೂಗುತಿರೆ ಕೇಳಿ ಹೊರಗೆ ಬರಲು
ಭರದಿ ಪಟ್ಟಭಿಷಿಕ್ತನಾಗಿ ರಾಷ್ಟ್ರದೊಳೊಪ್ಪಿದ ।೩।

ಆ ದೇಶ ಪದವಿ ಹನ್ನೆರಡು ವರುಷ ಮೂರು ಮಾಸ
ಮೋದದಿಂದನುಭವಿಸಿ ರಾಜಪದವ
ಸಾದರದಿ ಪಿಂಗಾಶ್ವಿಜ ಶುದ್ಧ ಸಪ್ತಮಿ
ಆ ಧರಿಯ ರಾಜಪುತ್ರಗೆಯಿತ್ತ ಮಹಿಮ ।೪।

ರಾಜಪುತ್ರ ಪತ್ನಿ ನಿಮಗೆ ಬೇಕಾದ ವಸ್ತು ವೈವುದೆನಲು
ಆ ಜನಪನ ಕೋಶದಲ್ಲಿ ಮಂದಾಸನದೊಳು
ರಾಜಿಸುತಿಪ್ಪ ಸೀತಾರಾಮ ಮೂರ್ತಿಗಳನು ತೆಗೆದುಕೊಂಡು
ವಾಜಿಯನೇರಿ ಕೂರ್ಮಕ್ಕೆ ಬಂದು ಪದ್ಮನಾಭರಿಗಿತ್ತನು ।೫।

ಪದುಮನಾಭಯತಿ ತಾನು ದಶಮತಿಗೆ ಅರ್ಪಿಸಲು
ಮುದದಿ ಮೂರು ಮಾಸದಿ ಹದಿಮೂರು ದಿನವು
ಮದನನಯ್ಯನ ಪೂಜಿಸಿ ಕೊಡಲು ತಾಂ ಪೂಜಿ
ಸಿದ ಆರು ವರುಷ ಇನ್ನೂರು ತೊಂಭತ್ತು ದಿನ ।೬।

ಗುರು ಪದ್ಮನಾಭರಾಜ್ಞದಲ್ಲಿಂದ ಒಂಭತ್ತು
ವರುಷ ಮೇಲೈವತ್ತು ಮೂರುದಿನವು
ಧರಿಣಿ ಜಯ ಮೂಲ ರಾಮನಂಘ್ರಿಯ ಭಜಿಸಿ
ಪುರಂದರವಿಟ್ಠಲನ ಪ್ರೀತಿ ಪಡೆದ ।೭।

**Sasithaa Moola RaamaaRchaa Koshe GajapatheH Sthithaa |**
**Yenaa Neetha namsthastai Shree Mannarahari Bhikshave ||**

- **a.** Second Direct Shishya of Srimadacharyaru
- **b.** Duration - 1324 to 1333
- **c.** Aradhana on Pushya Bahula Saptami
- **d.** Vrundavana at Chakra Theertha (Hampi) near Nava Vrundavana
- **e.** Poorvashrama naama - Shyama Shastri
- **f.** Birth place - Kalinga Rajya (Orissa State)
- **g.** Obtained Brahma Karaarchita Moola Seetharama devaru from Gajapathi Raja, King of Kalinga, as per instructions from Srimadacharyaru
- **h.** He was said to be the first sage King who ruled a state.
- **i.** He ruled the State Kalinga for some time and saved the country
- **j.** He is said to be the first to give Kannada Devaranama. "Hariye Idu Sariye" Written many but not available now.
- **k.** Works - Srimadacharyara Geetha Bhashya Teeka
  Srimadacharyara Dasha prakarana Teeka
  Yamaka Bharatha Teeka
- **l.** Successor – Sri Madhava Theertharu

**ನರಹರಿ ತೀರ್ಥರ ರಚನೆ**

ರಾ ಗ – ದ ರ್ಬಾ ರ್ : ತಾ ಳ – ಆ ದಿ ತಾ ಳ

ಹರಿಯೇ ಇದು ಸರಿಯೇ । ಪ ।

ಚರಣ ಸೇವಕನಲ್ಲಿ ಕರುಣ ಬಾರದ್ಯಾಕೆ । ಅ ಪ ।

ಪತಿತನೆಂದು ಶ್ರೀಪತಿ ರಕ್ಷಿಸದಿರೆ
ವಿತತವಾಹುದೆ ನಿನ್ನ ಪತಿತಪಾವನ ಕೀರ್ತಿ । ೧ ।

ಶಕ್ತ ನೀನಾಗಿದ್ದು ಭಕ್ತನುಪೇಕ್ಷಿಸೆ
ಭಕ್ತವತ್ಸಲನಾಮ ವ್ಯರ್ಥವಾಗದೆ । ೨ ।

ದಿಗಿಲಿಲ್ಲದೆ ಒದ್ದ ಭೃಗುವ ಪಾಲಿಸಿದೆ
ನಗಧರ ಎನ್ನ ಬಿಡುವ ಬಗೆ ಏನಿದು । ೩ ।

ಹೇಯ ಅಜಾಮಿಳನ ಕಾಯಲಿಲ್ಲೆ ಸ್ವ-
ಕೀಯನೆ, ನಾ ಪರಕೀಯನೆ ನಿನಗೆ । ೪ ।

ಉಂಟು ಹಿರಣ್ಯಕನ ಕಂಟಕ ಬಿಡಿಸಿದ್ದು
ನೆಂಟನೆ ನಿನಗೆ ಬಂಟ ನಾನಲ್ಲವೆ । ೫ ।

ಕೆಟ್ಟ ಅಹಲ್ಯೆಯ ದಿಟ್ಟ ಪಾಲಿಸಿದೆ
ಕೊಟ್ಟಳು ಅವಳೇನ ಬಿಟ್ಟದ್ದು ನಾನೇನ । ೬ ।

ದೊರೆ ನಿನ್ನ ಮನಸಿಗೆ ಸರಿಬಂದಂತೆ ಮಾಡು
ಮೊರೆ ಹೊಕ್ಕೆನು ನಾ ನರಹರಿ ಪೂರ್ಣನೆ । ೭ ।